ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ನಗರದಲ್ಲಿ ಮೆಟ್ರೋ ರೈಲು ಕಲ್ಪಿಸಲು ಕರ್ನಾಟಕ ಸರ್ಕಾರ ಮೆ : ಡೆಲ್ಲಿ ಮೆಟ್ರೋ ರೈಲು ಕಾರ್ಪೋರೇಷನ್‌ನಿಂದ ವಿವರವಾದ ಯೋಜನಾ ವರದಿಯನ್ನು ಪಡೆದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹ ಭಾಗಿತ್ವವನ್ನು ಪಡೆಯಲು ಮತ್ತು ವಿವಿಧ ತೀರುವಳಿಯನ್ನು ನೀಡಲು ತಿಳುವಳಿಕೆ ಪತ್ರ (ಎರ್‌ಒಯು) ತಯಾರಿಸಿ ಕೇಂದ್ರ ಸರ್ಕಾರಕ್ಕೆ ಆಸ್ತಿ ಸ್ವಾಧೀನ, ಉಪಯುಕ್ತ ಸ್ಥಳಾಂತರ, ವಿವರವಾದ ವಿನ್ಯಾಸಗಳ, ನಕ್ಷೆಗಳ ತಯಾರಿಕೆ ಹಾಗೂ ಟೆಂಡರ್ ದಸ್ತಾವೇಜುಗಳ ಸಿದ್ಧತೆ ಇವೇ ಮುಂತಾದ ಪ್ರಾರಂಭಿಕ ಚಟುವಟಿಕೆ ಬಗ್ಗೆ ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತವು ಕ್ರಮ ಕೈಗೊಂಡಿದೆ.

ಆ) ಯೋಜನಾ ವರದಿಗಾಗಿ ರೂ. 1 ಕೋಟಿ 50 ಲಕ್ಷ ಖರ್ಚು ಮಾಡಲಾಗಿದೆ.

ಇ) ಈ ಯೋಜನೆಗೆ ಕೇಂದ್ರ ಯೋಜನಾ ಆಯೋಗದ ತಾತ್ವಿಕ ಒಪ್ಪಿಗೆ ದೊರಕಿದ್ದು, ಕೇಂದ್ರ ಸರ್ಕಾರದಿಂದ ಪಾಲು ಬಂಡವಾಳ ಹಾಗೂ ತೆರಿಗೆ ರಿಯಾಯಿತಿ ಮತ್ತು ಇತರ ಒಪ್ಪಿಗೆಯನ್ನು ಕಾಯಲಾಗುತ್ತಿದೆ.

ಈ) ಏಪ್ರಿಲ್ 2003ರ ದರದಂತೆ ಯೋಜನೆಯ ವೆಚ್ಚ ರೂ. 4989.00 ಕೋಟಿ ಎಂದು ಅಂದಾಜಿಸಲಾಗಿದೆ.

ಉ) ಈ ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮತಿ ದೊರಕಿದ ತಕ್ಷಣ ಅಂದರೆ 2004 ರಲ್ಲಿ ಪ್ರಾರಂಭಿಸಿ 5 ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲು ಅಂದಾಜಿಸಲಾಗಿದೆ.

ರಾಜ್ಯದಲ್ಲಿ ನೇಕಾರರಿಗೆ ವಿಶೇಷ ಪ್ಯಾಕೇಜ್,

161(176) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು.(ಶಿವಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ನೇಕಾರರಿಗಾಗಿ ಹಿಂದಿನ ಸರ್ಕಾರ ವಿಶೇಷ ಪ್ಯಾಕೇಜ್ ಜಾರಿಗೊಳಿಸಲು ನಿರ್ಧರಿಸಿದುದ್ದು, ನಿಜವಲ್ಲವೇ ;

ಆ) ಹಾಗಿದ್ದಲ್ಲಿ ಆ ವಿಶೇಷ ಪ್ಯಾಕೇಜ್‌ಗಾಗಿ ಮೀಸಲಾಗಿಟ್ಟ ಹಣ ಹಾಗೂ ಅದರಡಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳು ಯಾವುವು ;

ಇ) ಈ ವಿಶೇಷ ಪ್ಯಾಕೇಜ್‌ನ್ನು ಜಾರಿಗೊಳಿಸಲಾಗಿದೆಯೇ ;

ಈ) ಈ ವಿಶೇಷ ಪ್ಯಾಕೇಜಿಗಾಗಿ 2004–05 ರಲ್ಲಿ ಸರ್ಕಾರ ಮೀಸಲಾಗಿಟ್ಟಿರುವ ಹಣವೆಷ್ಟು ;

ಉ) ಈ ವಿಶೇಷ ಪ್ಯಾಕೇಜಿನ ಅನುಷ್ಠಾನಕ್ಕಾಗಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಐದು ವರ್ಷಗಳ ಅವಧಿಗೆ ರೂ. 101.82 ಕೋಟಿಗಳು ಬೇಕಾಗಲಿದ್ದು ಪ್ಯಾಕೇಜಿನ ಅಡಿ ಕೈಗೊಳ್ಳಲಿರುವ ಕಾರ್ಯಕ್ರಮಗಳ ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಇ) ಆ ಪ್ಯಾಕೇಜ್‌ಗೆ ಸರ್ಕಾರಿ ಆದೇಶ ಸಂಖ್ಯೆ ವಾಕೈ 110 ಜಕೈಇ 2003 ದಿನಾಂಕ 26.2.2004 ರಲ್ಲಿ ಮಂಜೂರಾತಿ ನೀಡಲಾಗಿದೆ.

ಈ) ರೂ. 20.00 ಕೋಟಿಗಳು.

ಉ) ಆ ಪ್ಯಾಕೇಜಿನಲ್ಲಿ ನಮೂದಿಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 176 ಕ್ಕೆ ಅನುಬಂಧ

- ಮುಂದಿನ ಐದು ವರ್ಷಗಳಲ್ಲಿ (2004–05 ರಿಂದ 2008–2009) ಪ್ರತಿ ವರ್ಷ 160 ಎಕರೆ ಜಮೀನನ್ನು ವಶಪಡಿಸಿಕೊಂಡು 3000 ನೇಕಾರರಿಗೆ ನಿವೇಶನ ಹಂಚುವುದು (ನಿವೇಶನದ ವಿತೀರ್ಣ 36 x 40 ಆಗಿದ್ದು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಆಶ್ರಯ ಯೋಜನೆ ಅಡಿ ನಿಗದಿಪಡಿಸಿರುವ ವಿಧಾನವನ್ನು ಪಾಲಿಸುವುದು)
- ಈಗಾಗಲೇ ಇರುವ 100 ನೇಕಾರರ ಕಾಲೋನಿಗಳಿಗೆ ಪ್ರತಿ ಕಾಲೋನಿಗೆ ರೂ. 1.50 ಲಕ್ಷಗಳ ವೆಚ್ಚದಲ್ಲಿ ಕುಡಿಯುವ ನೀರು ಸರಬರಾಜು ಸೌಲಭ್ಯ ಒದಗಿಸುವುದು.
- 10,000 (ಹತ್ತು ಸಾವಿರ) ನೇಕಾರರು ಹಾಗೂ ನೇಕಾರರ ಸಹಕಾರ ಸಂಘಗಳು ಸರ್ಕಾರದಿಂದ ಪಡೆದಿರುವ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದು.
- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕೈಮಗ್ಗ ಸಹಕಾರ ಸಂಘಗಳು ಮತ್ತು ಕೈಮಗ್ಗ ನೇಕಾರರು ತೆಗೆದುಕೊಳ್ಳುವ ದುಡಿಮೆ ಬಂಡವಾಳ ಸಾಲದ ಮೇಲಿನ ಬಡ್ಡಿಯು ಶೇಕಡ 7 ನ್ನು ಮೀರಿದ್ದಲ್ಲಿ ಅಂತಹ ಬಡ್ಡಿಯಲ್ಲಿ ಉಳಿದ ಶೇಕಡ 3.5 ರಷ್ಟನ್ನು ಪಾವತಿಸಲು ಬಡ್ಡಿಯ ಸಹಾಯಧನ ನೀಡುವುದು.
- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು
  - ಅ) ನಿಗಮದ ನೇಕಾರರ 1942 ಮನೆಗಳಿಗೆ ಸಂಬಂಧಿಸಿದಂತೆ ಅಭಿವೃದ್ಧಿ ವೆಚ್ಚವನ್ನು ಮನ್ನಾ ಮಾಡುವುದು.
  - ಆ) ನಿಗಮವು ನೇಕಾರರ ಹೆಸರಿನಲ್ಲಿ ಪಡೆದ ದುಡಿಮೆ ಬಂಡವಾಳ ಸಾಲದ ಮೇಲಿನ ಬಡ್ಡಿಯನ್ನು ಭರಿಸುವುದು.
  - ಇ) ನಿಗಮದ ವ್ಯಾಪ್ತಿಯ 3576 ಮನೆಗಳ ನೋಂದಾಣಿ ಶುಲ್ಕ ಹಾಗೂ ಮುದ್ರಾಂಕ ಶುಲ್ಕವನ್ನು ಸರ್ಕಾರ ಮನ್ನಾ ಮಾಡುವುದು.
- ತಂತ್ರಜ್ಞಾನ ಮತ್ತು ಕುಶಲತೆ ಉನ್ನತೀಕರಣ
  - ಅ) ಕೈಮಗ್ಗ ತಂತ್ರಜ್ಞಾನ ಉನ್ನತೀಕರಣ 1500 ಕೈಮಗ್ಗಗಳನ್ನು 2 ವರ್ಷಗಳಲ್ಲಿ ವಾರ್ಷಿಕ 750 ಮಗ್ಗಗಳಂತೆ (ಹಣಕಾಸು ಪಾಲುದಾರಿಕೆ–ಕೇಂದ್ರ: ರಾಜ್ಯ: ನೇಕಾರು :: 12:38:50) (ಪ್ರತಿ ಮಗ್ಗಕ್ಕೆ ಗರಿಷ್ಠ ರೂ. 20,000,00)
  - ಆ) ವಿದ್ಯುತ್ ಮಗ್ಗ ತಂತ್ರಜ್ಞಾನ ಆಧುನೀಕರಣ–500 ವಿದ್ಯುತ್ ಮಗ್ಗಗಳನ್ನು 2 ವರ್ಷಗಳಲ್ಲಿ ವಾರ್ಷಿಕ 250 ರಂತೆ (ಹಣಕಾಸು ಪಾಲುದಾರಿಕೆ–ರಾಜ್ಯ : ನೇಕಾರರು : 50:50) (ಪ್ರತಿ ಮಗ್ಗಕ್ಕೆ ರೂ.28,000.00)
  - ಇ) ತರಬೇತಿ ಕಾರ್ಯಕ್ರಮ : ಪ್ರತಿ ವರ್ಷ 500 ನೇಕಾರರಿಗೆ ರೂ.30.00 ಲಕ್ಷಗಳ ವಾರ್ಷಿಕ ವೆಚ್ಚದಂತೆ ಐದು ವರ್ಷಗಳಿಗೆ.

- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಇವರು ವಿಶ್ವ ಯೋಜನೆಯಡಿಯಲ್ಲಿ ನಿರ್ಮಿಸಿರುವಂತಹ ಕಾರ್ಯಗಾರಗಳನ್ನು ಉಣ್ಣೆ ನೇಕಾರರಿಗೆ ವರ್ಗಾಯಿಸುವುದು ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಇವುಗಳನ್ನು ಬಳಸಿಕೊಳ್ಳುವುದು.
- ಮುಂದಿನ ಐದು ವರ್ಷಗಳಲ್ಲಿ ಗದಗ್, ಕೈಮಗ್ಗ ತರಬೇತಿ ಕೇಂದ್ರ ಮತ್ತು ಜಮಖಂಡಿಯಲ್ಲಿ ಕೈಮಗ್ಗ ಕೇಂದ್ರ ಇವುಗಳ ಆವೃತ್ತ ವೆಚ್ಚ ಭರಿಸಲು ಪ್ರತೀ ವರ್ಷ ಕ್ರಮವಾಗಿ ರೂ. 40.00 ಲಕ್ಷ ಹಾಗೂ ರೂ. 32.00 ಲಕ್ಷಗಳ ಅನುದಾನ ನೀಡುವುದು.
- ಸಹಕಾರಿ ಸಂಸ್ಥೆಗಳು, ಕಾವೇರಿ ಹ್ಯಾಂಡ್‌ಲೂಮ್ಸ್ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಇವುಗಳ ಹಳೆಯ ದಾಸ್ತಾನುಗಳ ವಿಲೇವಾರಿ ಮಾಡಿದ ಶೇಕಡ 20 ರ ಪ್ರೋತ್ಸಾಹಧನ ನೀಡುವುದು.
- ದೊಡ್ಡಬಳ್ಳಾಪುರ, ಬೆಳಗಾವಿ, ದಾವಣಗೆರೆ ಹಾಗು ಗದಗ್ ನಗರಗಳಲ್ಲಿ ಕೇಂದ್ರೀಯ ಯೋಜನೆಗಳಾದ ಟಿ.ಸಿ.ಐ.ಡಿ.ಎಸ್. ಗುಂಪು ಕಾರ್ಯಗಾರ ಯೋಜನೆ ಮತ್ತು ಟಿ.ಯು.ಎಫ್.ಎಸ್. ಸಮನ್ವಯದೊಂದಿಗೆ ಸ್ಥಾಪಿಸಲು ಬೇಕಾಗುವ ಭೂಮಿಯ ವೆಚ್ಚವನ್ನು ರಾಜ್ಯ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿ/ನೇಕಾರರ ವತಿಯಿಂದ 75:25 ಅನುಪಾತದಲ್ಲಿ ಭರಿಸುವುದು.
- ನಾಲ್ಕು ವಿದ್ಯುತ್ ಮಗ್ಗಗಳಿಂದ ಹೆಚ್ಚಿಗೆ ಇರದ ಹಾಗೂ ಐದು ಹೆಚ್.ಪಿ.ಗಿಂತ ಹೆಚ್ಚಿನ ವಿದ್ಯುತ್ ಸೌಲಭ್ಯ ಹೊಂದಿರದ ವಿದ್ಯುತ್ ಚಾಲಿತ ಮಗ್ಗಗಳಿಗೆ ಉಪಯೋಗಿಸುವ ವಿದ್ಯುತ್‌ಚ್ಛಕ್ತಿಯ ಶೇಕಡ 50 ರಷ್ಟು ವಿದ್ಯುತ್ ಸಬ್ಸಿಡಿ ಅಥವಾ ಪ್ರತೀ ವಿದ್ಯುತ್ ಮಗ್ಗಕ್ಕೆ ಮಾಸಿಕವಾಗಿ ರೂ. 200.00 ಇವುಗಳಲ್ಲಿ ಯಾವುದು ಕಡಿಮೆಯೇ ಅದನ್ನು ಸರ್ಕಾರ ಭರಿಸುವುದು.
- ಸರ್ಕಾರದ ವಿವಿಧ ಇಲಾಖೆಸಾರ್ವಜನಿಕ ವಲಯ ಉದ್ದಿಮೆಗಳಿಗೆ ಬೇಕಾಗುವ ಬಟ್ಟೆಯನ್ನು ಖರೀದಿಸುವುದನ್ನು ನಿರ್ಧರಿಸಲು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸುವುದು.
- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಆರ್ಥಿಕ ಪುನರ್‌ರಚನೆ ಹಾಗೂ ಪುನಶ್ಚೇತನ (ಸ್ವಯಂ ನಿವೃತ್ತಿ ಯೋಜನೆ, ಮಾರ್ಜಿನ್ ಹಣ ಹಾಗೂ ಶೇರು ಬಂಡವಾಳ ಪರಿವರ್ತನೆ ಇತ್ಯಾದಿ)

ಉದ್ಯೋಗ ನಿಧಿ ಸ್ಥಾಪಿಸುವ ಬಗ್ಗೆ

162(365) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು.(ಶಿವಾಜಿನಗರ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗುಡಿ ಹಾಗೂ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಮುಂದೆ ಬರುವ ಗ್ರಾಮೀಣ ಯುವಕರಿಗೆ ಮಂಜೂರಾತಿಯಾಗಿರುವ ಯೋಜನೆಗಳ ಪ್ರಾಯೋಜಕರ ಪಾಲಿನ ಶೇ 20 ರಷ್ಟು ಮೊತ್ತವನ್ನು ಸರ್ಕಾರವೇ ಭರಿಸುವ ಉದ್ಯೋಗ ನಿಧಿ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ ;